ಆದ ಮೇಲೆ, 'ಈವಾಗ ಪ್ಯಾಕ್ ಅಪ್. ನಾಳೆ ಲೊಕೇಶನ್ ಲಿಂಗನಗೌಡ ಪಾಟೀಲರ ಮನೆ. ಶಾರ್ಪ್ ಟೆನ್ ಇನ್ ದಿ ಮಾರ್ನಿಂಗ್' ಎಂದು ಹೇಳಿ ಬೀಳ್ಕೊಟ್ಟಿದ್ದರು.

'ಎಂಥಾ ಮಾರಾಯ್ರಿ? ಇವರು ಯಾವುದೋ ಸಿನಿಮಾ ಮೂಡಲ್ಲಿದ್ದಂಗ ಕಾಣತ್ರು. ಲೈಟ್ಸ್ ಕ್ಯಾಮರಾ ಆಕ್ಷನ್ ಥರ ಶೂಟಿಂಗ್ ಭಾಷೇಲಿ ಮಾತಾಡತ್ರು. ನಾಳೆ ಸುಮಿ ಅಪ್ಪ ನನ್ನನ್ನು ಶೂಟ್ ಮಾಡದಿದ್ರೆ ಸಾಕು' ಎಂದು ನಕ್ಕಿದ್ದ. 'ಪ್ರೀತ್ಸೋ ಹುಡುಗಿ ಹಾಸೀಲ್ ಆಗ್ಬೇಕಂದ್ರ, ಗುಂಡಿಗೂ ರೆಡಿ ಇರ್ಬೇಕು ಅಳಿಯಂದಿರೇ' ಎಂದು ಶೈಲತ್ತೆಯೂ ತಮಾಷೆ ಮಾಡಿದ್ದಳು. 'ನೋಡು, ಈಗ ಅವರೇ ನಿನ್ನ ಪ್ರೇಮಕತೆಯ ನಿರ್ದೇಶಕರು. ಲಿಂಗನಗೌಡ ಪಾಟೀಲರ ಅಡ್ಡಾದಲ್ಲಿ ಶೂಟ್‌ಔಟಿಗೆ ರೆಡಿಯಿರು, ತಮ್ಮ' ಎಂದು ನಕ್ಕಿದ್ದಳು. ತನಗಿದು ಜೀವನ್ಮರಣದ ಪ್ರಶ್ನೆಯಾಗಿದೆ. ಇವರಿಬ್ಬರೂ ಸಾಹಿತ್ಯ ಮತ್ತು ಸಿನಿಮಾಗಳ ಗುಂಗಿನಲ್ಲಿ ತನ್ನ ಪರಿಸ್ಥಿತಿಯನ್ನು ಹಗುರವಾಗಿ ಪರಿಗಣಿಸಿರುವರೋ ಹೇಗೆ, ಎಂಬ ಅನುಮಾನ ನಿನ್ನೆಯಿಂದಲೂ ಕೊರೆಯುತ್ತಿತ್ತು. ಜೊತೆಗೆ ಅಲ್ಲಿ ಸುಮಿಯನ್ನು ಕಾಣುವೆನೋ ಇಲ್ಲವೋ ಎಂಬ ಆತಂಕವೂ ಇದ್ದುದರಿಂದ ಪ್ರೀತಂ ಪ್ರಯಾಣದುದ್ದಕ್ಕೂ ಮೌನವಾಗಿಯೇ ಇದ್ದ. ಅದನ್ನು ಅರಿತವರಂತೆ ನಾಗತಿಹಳ್ಳಿ ಸರ್ 'ಚಿಯರ್ ಅಪ್ ಯಂಗ್ ಮ್ಯಾನ್' ಎಂದು ಅವನನ್ನು ಗೆಲುವಾಗಿಸಲು ನೋಡಿದರು. 'ನಿಮ್ಮ ಕಾರವಾರಕ್ಕೆ ಬಂದಾಗ, ಹೋಟೆಲ್ ಅಮೃತದಲ್ಲಿ ಮೀನೂಟ ಹಾಕಿಸಬೇಕು, ನೆನಪಿರಲಿ' ಎಂದರು. 'ನಿಮ್ಮಿಂದ ಈ ಪಾಪದ ಮಕ್ಕಳ ಪ್ರೇಮ ಒಂದು ನೆಲೆ ಕಂಡರೆ, ಇವನೇ ತಾಜಾ ತಾಜಾ ಮೀನು ಹಿಡಿದು ಫಿಶ್ ಕರಿ, ರವಾ ಫ್ರೈ ಮಾಡಿ ಊಟ ಹಾಕಿಸ್ತಾನೆ, ಅಲ್ವೇನೋ ಪ್ರೀತಂ' ಎಂದಳು ಶೈಲತ್ತೆ. ಅಷ್ಟರಲ್ಲಿ ಅವಳ ಫೋನ್ ರಿಂಗಾಗಿ 'ಹೌದು ಅತ್ತಿಗೆ, ನಾವು ಹೊಸೂರು ಕ್ರಾಸ್ ದಾಟೀವಿ, ಇನ್ನ ಹತ್ತ ನಿಮಿಷದಾಗ ಅಲ್ಲಿರ್ತೀವಿ' ಎಂದಳು.

ಹಳೆಯದಾದರೂ ಗತವೈಭವದ ಗತ್ತಿನಿಂದ ನಿಂತಿರುವ ಇಮಾರತು ಬಹುದೂರದಿಂದಲೇ ಕಾಣುತ್ತಿತ್ತು. ಸುತ್ತಲೂ ಕಣ್ಣು ಮುಟ್ಟುವವರೆಗೂ ಚಾಚಿರುವ ಬಯಲು. ಹತ್ತಿ, ಜೋಳ, ಶೇಂಗಾದಂಥ ಫಸಲುಗಳು ತಲೆ ಎತ್ತಿ ತೂಗುತ್ತಿದ್ದವು. ಪ್ರೀತಂನಿಗೆ ಕೆಲವು ಬೆಳೆಗಳ ಹೆಸರೇ ಗೊತ್ತಿರಲಿಲ್ಲ. ಬಿಸಿಲು ನಾಡಿನಲ್ಲಿ ಕಾಡಿನ ಹಸಿರು ಇಲ್ಲದಿದ್ದರೂ, ನೆಲಕ್ಕೆ ಹಾಸಿದ ಇಂಥ ಹಸಿರನ್ನು, ಇಷ್ಟೊಂದು ರೀತಿಯ ಬೆಳೆಗಳನ್ನು ನೋಡಿ ಅಚ್ಚರಿಗೊಂಡಿದ್ದ. ಕಾರು ಬಂದದ್ದೇ ಆಳುಗಳು ಓಡೋಡಿ ಬಂದು ಗೇಟು ತೆರೆದರು. ನಾಗತಿಹಳ್ಳಿಯವರನ್ನು ಸ್ವಾಗತಿಸಲು ಇಡೀ ಕುಟುಂಬವೇ ಅಂಗಳಕ್ಕೆ ಬಂದು ನಿಂತಿತ್ತು. ಲಿಂಗಣ್ಣನವರು ಗೇಟ್‌ವರೆಗೂ ಬಂದು ನಾಗತಿಹಳ್ಳಿಯವರನ್ನು ಬರಮಾಡಿಕೊಂಡರು.

ರೈತರು ಎತ್ತುಗಳಿಗೆ ಸ್ನಾನ ಮಾಡಿಸಿ ಕೊಂಬಣಸು, ರಿಬ್ಬನ್ನು ಕಟ್ಟಿ, ಕೊರಳಲ್ಲಿ ಗೆಜ್ಜೆಗಳನ್ನು ತೂಗಿದ್ದರು. ಚಕ್ಕಡಿಗಾಡಿಗಳನ್ನೂ ತೊಳೆದು ಅಲಂಕರಿಸಿದ್ದರು. ನಾಗತಿಹಳ್ಳಿ ಸರ್ 'ಎಂಥ ಫಲವತ್ತಾದ ಭೂಮಿ. ಈ ಕಪ್ಪು ಮಣ್ಣು ನೋಡಿ ಲಂಕೇಶರ 'ಅವ್ವ' ಕವನ ನೆನಪಾಯ್ತು!' ಎಂದರು. 'ಹೂನ್ರೀ ಸಾಯಬ್ರ, ಕಾಡಗಿ ಬಣ್ಣದ ಎರಿಭೂಮಿರಿ ನಮ್ದು. ಬೀಜ ಊರಿದರ ಸಾಕು, ಈ ಹೊಲ ಫಲ ಎತ್ತಿ ಎತ್ತಿ ಕೊಡತೈತಿ. ಎಕರೆಗೆ ಚಾಲೀಸ್ ಚೀಲ ಜ್ವಾಳ ಗ್ಯಾರಂಟಿರಿ. ಆಕಡಿ ಯಾಲಕ್ಕಿ ಹಚ್ಚೇವ್ರಿ. ನದಿತಾವ ಕಬ್ಬು ಸೇಂಗಾ ಬೆಳದೀವ್ರಿ' ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತ ಲಿಂಗಣ್ಣನವರು ಅವರನ್ನು ಮನೆವರೆಗೂ ಕರೆತಂದರು. ಜಮೀನ್ದಾರಿಕೆಯನ್ನೂ, ಪಾಳೆಗಾರಿಕೆಯನ್ನೂ ಪ್ರದರ್ಶಿಸುವ ಹಳೆಯ ಮಜಬೂತು ಕಂಬಗಳು, ತೊಲೆಗಳು, ಆಸನಗಳು, ಪಲ್ಲಂಗಗಳು ಇರುವ ಆ ಮನೆಯಲ್ಲಿ ನಾಗತಿಹಳ್ಳಿಯವರಿಗೆ ಅತಿಥಿ ಸತ್ಕಾರ ಭರ್ಜರಿಯಾಗಿಯೇ ನಡೆಯಿತು. ಉತ್ಸವಮೂರ್ತಿ ನಾಗತಿಹಳ್ಳಿಯವರಾದ್ದರಿಂದ ಪ್ರೀತಂನತ್ತ ಯಾರೂ ಗಮನ ಕೊಡಲಿಲ್ಲ. ಆ ಮನೆಯ ಕೆಲವು ಕಿಶೋರಿಯರು ಮಾತ್ರ ಪ್ರೀತಂನ ಮಿಂಚಿನಂಥ ಕಣ್ಣುಗಳು ಮುನ್ನೂರರವತ್ತು ಡಿಗ್ರಿ ಕೋನಗಳಲ್ಲಿ ಏನನ್ನೋ ಹುಡುಕಾಡುವುದನ್ನು ಗಮನಿಸಿದ್ದವು. ಪ್ರೀತಂನ ವಿಶಿಷ್ಟ ಮೈಕಟ್ಟು, ಗುಂಗುರು ಕೂದಲಿನ ಆಕರ್ಷಣೆಯಿಂದ 'ಇವನ್ಯಾವ ಊರಿನ ಹೈದ ಕಣಮ್ಮೋ' ಅನ್ನೋ ಥರ ಕದ್ದು ಕದ್ದು ನೋಡುತ್ತಿದ್ದವು. ಪ್ರೀತಂನ ಕಣ್ಣುಗಳು ಮಾತ್ರ ಆ ಇಮಾರತಿನ ಅಷ್ಟೊಂದು ಬಾಗಿಲುಗಳಲ್ಲಿ ಯಾವುದೋ ಒಂದರಿಂದ ಸುಮಿ ಪ್ರಕಟವಾಗುವುದನ್ನು ಕಾದಿದ್ದವು. ಎಲ್ಲೆಲ್ಲೂ ಸಂಭ್ರಮವಿತ್ತು. ಸಡಗರವಿತ್ತು. ಆದರೆ ಸುಮಿಯ ಸುಳಿವೇ ಇರಲಿಲ್ಲ. ಹೃದಯದಲ್ಲಿ ಪ್ರೀತಿಯೇ ತುಂಬಿರುವ ಹುಡುಗಿ ಸುಮಿಗೆ ಸ್ಥಾನವಿಲ್ಲದ ಈ ಕುಟುಂಬವು ಎಷ್ಟೇ ದೊಡ್ಡದಿದ್ದರೂ ಕುಬ್ಜವೇ ಅನಿಸತೊಡಗಿತು.

ಈ ನಡುವೆ ಸಾಹಿತ್ಯ, ಸಂಗೀತ, ಸಿನಿಮಾ ಎಲ್ಲವೂ ಚರ್ಚೆಯಾಯಿತು. ಗದ್ದಲದ ನಡುವೆಯೇ ಮಾತು, ನಗು, ಅಭಿಮಾನ, ಪ್ರೀತಿ, ಸಂಭ್ರಮ ತುಳುಕಾಡುತ್ತಿತ್ತು. ಯಾರೋ 'ಊಟಕ್ಕೇನೈತ್ರಿ?' ಅಂದರು. ಅದಕ್ಕೆ ಇನ್ಯಾರೋ 'ಊಟಕ್ಕೆ ಶೇಂಗಾ ಹೋಳಿಗೆ, ಕರಿಗಡಬು, ಸಜ್ಜಿ ರೊಟ್ಟಿ, ಜೋಳದ ರೊಟ್ಟಿ, ಹುಳಿಬಾನ, ಮೊಸರು ಬಜ್ಜಿ, ಕೆಂಪಿಂಡಿ, ಶೇಂಗಾ ಚಟ್ನಿ, ಗುರೆಳ್ಳು ಚಟ್ನಿ, ಅಗಸಿ ಚಟ್ನಿ, ತರಕಾರಿ ಪಲ್ಲೆ, ಪುಂಡಿಪಲ್ಲೆ, ಕಡ್ಲಿ ಪಲ್ಲೆ, ಮಡಕೆ ಕಾಳ್ ಪಲ್ಲೆ ಎಲ್ಲಾ ರೆಡಿ ಐತಿ' ಎಂದು ಅನೌನ್ಸ್ ಮಾಡಿದರು. ಪ್ರೀತಂನಿಗೆ ಹೆಚ್ಚಿನವುಗಳ ಹೆಸರೂ ಗೊತ್ತಿರಲಿಲ್ಲ. ಸುಮಿಯಿಲ್ಲದೇ ಅವುಗಳಿಗೆ ಸ್ವಾದವೂ ಇರದು ಅನಿಸಿತು. ಊಟಕ್ಕಿಂತ ಮೊದಲು ಶೈಲತ್ತೆ ಚಿಕ್ಕ ಸನ್ಮಾನ ಕಾರ್ಯಕ್ರಮವನ್ನೂ ನೆರವೇರಿಸಿದಳು. ಈವರೆಗೆ ಅನೌಪಚಾರಿಕವಾಗಿದ್ದ ಮಾತುಕತೆ ಭಾಷಣದ ಸ್ವರೂಪ ಪಡೆಯಿತು. ನಾಗತಿಹಳ್ಳಿಯವರು 'ತಲತಲಾಂತರದಿಂದ ಜಮೀನ್ದಾರಿಕೆಯ ಕುಟುಂಬವಾಗಿಯೂ ಹಿಂದಿನ ಪಾಳೆಗಾರಿಕೆ ಮರೆತು ಸಮಾನತೆಯನ್ನು ಪಾಲಿಸು ತ್ತಿರುವ, ಜೊತೆಗೆ ಕಲೆ ಸಂಸ್ಕೃತಿ ಬಗ್ಗೆ ಆದರ ಹೊಂದಿರುವ ನಿಮ್ಮೆಲ್ಲರಿಗೂ ಮೊತ್ತಮೊದಲು ಶರಣು ಎನ್ನುತ್ತೇನೆ' ಎಂದರು. 'ನಿಮ್ಮ ಮನುಷ್ಯಪ್ರೀತಿ, ಹೃದಯ ವೈಶಾಲ್ಯಕ್ಕೆ ಹೃದಯಪೂರ್ವಕವಾಗಿ ಅಭಿನಂದಿಸುತ್ತೇನೆ' ಎಂದರು. ಶೈಲಕ್ಕನಿಗೂ ಪ್ರೀತಂನಿಗೂ ಅದು ವ್ಯಂಗ್ಯದ ಮಾತು ಅನಿಸಿ ಮನಸಲ್ಲೇ ನಕ್ಕರು. ಮಕ್ಕಳು ಚಪ್ಪಾಳೆ ತಟ್ಟಿದರು. 'ಈ ಜಗತ್ತಿಗೆ ಪ್ರೇಮವೇ ಬುನಾದಿ. ಪ್ರೇಮದ ಸ್ಪರ್ಶದಿಂದ ಮಾತ್ರ ಮನುಷ್ಯತ್ವದ ಅರಿವಾಗುತ್ತದೆ. ಪ್ರೇಮವು ಲೌಕಿಕವನ್ನು ದಾಟುವ ಹೆಬ್ಬಾಗಿಲು. ನಮ್ಮನ್ನು ಆಧ್ಯಾತ್ಮಿಕ ನೆಲೆಗೆ ಒಯ್ಯುವುದೂ ಈ ಪ್ರೇಮವೇ! ಹೃದಯ ಶ್ರೀಮಂತಿಕೆಯಿಲ್ಲದಿದ್ದರೆ

## ಕಳೆದ ಸಂಚಿಕೆಯಲ್ಲಿ



ಸುಮಿಯೆನ್ನುವ ಪ್ರೇಮದ ಬೆಳದಿಂಗಳಲ್ಲಿ ಮೀಯುತ್ತ ಸುತ್ತಲ ಲೋಕವನ್ನು ಮರೆತಿದ್ದ ಪ್ರೀತಂನ ಮೇಲೆ ಇದ್ದಕ್ಕಿದ್ದಂತೆ ದಾಳಿ ನಡೆಯಿತು. ಸುಮಿಯ ಸಮಯಪ್ರಜ್ಞೆಯಿಂದಾಗಿ ತಲೆಯೊಡೆಸಿಕೊಂಡರೂ ಪ್ರೀತಂ ಬದುಕುಳಿದ. ಆದರೂ ಅವನ ಪ್ರೇಮದ ಬಾಳಿಕೆ ಡೋಲಾಯಮಾನವೆನಿಸಿತು. ಗಾಯಗೊಂಡ ಹುಡುಗನನ್ನು ಬೀಳ್ಕೊಂಡು ಅಣ್ಣನೊಂದಿಗೆ ಹೊರಟ ಸುಮಿ ಮತ್ತೆ ಕಣ್ಣಿಗೆ ಬೀಳಲಿಲ್ಲ. ಪ್ರೇಮದಿಂದ ಗಾಯಗೊಂಡ ಹುಡುಗನ ಆರೈಕೆಗೆ ಬಂಧುಮಿತ್ರರೆಲ್ಲ ಒಂದುಗೂಡಿದರು. ಜೀವ ಅಪಾಯಕ್ಕೆ ಸಿಕ್ಕ ಸಮಯದಲ್ಲಿ ತನ್ನ ಪ್ರೇಮ ಬಯಲಾದದ್ದು ಹಾಗೂ ಅದಕ್ಕೆ ಎಲ್ಲರ ಹಸಿರುನಿಶಾನೆ ದೊರೆತದ್ದು ಪ್ರೀತಂನಿಗೆ ಅಚ್ಚರಿಯೊಂದಿಗೆ ನಿರಾಳತೆಯನ್ನೂ ಉಂಟುಮಾಡಿತು. ಆವರೆಗೆ ಎದುರಾಳಿಯಂತೆ ಕಾಣಿಸುತ್ತಿದ್ದ ರೋಹಿತ್ ಒಮ್ಮೆಗೇ ಆಪ್ತಮಿತ್ರನಂತೆ ಕಾಣಿಸತೊಡಗಿದ. ಇದಾವುದರ ಅರಿವಿಲ್ಲದ ಸುಮಿಯನ್ನು ಅವಳ ಕುಟುಂಬ ಕಾರವಾರದಿಂದ ಬಿಸಿಲಸೀಮೆ ಗುಲ್ಬರ್ಗಾಕ್ಕೆ ಹಾರಿಸಿಕೊಂಡು ಹೋಯಿತು. ಆದರೆ, ಪ್ರೇಮದ ಸೆಳೆತಕ್ಕೆ ಸಿಲುಕಿದ ಮನಸ್ಸಿಗೆ ಊರುಗಳ ಅಂತರವೊಂದು ಅಂತರವೆ? ಕಾರವಾರದ ಕಡಲು ಬಯಲುಸೀಮೆ ಗುಲ್ಬರ್ಗಾದತ್ತ ಮುಖ ಮಾಡಲು ಹೆಚ್ಚಿನ ಸಮಯ ಬೇಕಾಗಲಿಲ್ಲ.